# ಕಲಿಕೆಯ ಖುಷಿಯಲ್ಲಿ ಧನ್ಯಾ

'ನನ್ನ ಸಿನಿಮಾ ಕರಿಯರ್ ಅನ್ನು ನಾನು ರೂಪಿಸಿಕೊಳ್ಳುತ್ತಿರುವ ರೀತಿಯ ಬಗ್ಗೆ ನನಗೆ ಖುಷಿಯಿದೆ. ಒಬ್ಬ ನಟಿಯಾಗಿ, ನನಗೆ ಸಿಕ್ಕ ಪಾತ್ರಗಳು ನನ್ನನ್ನು ಹೇಗೆ ಪೋಷಿಸುತ್ತಿವೆ ಎಂಬುದನ್ನು ನಾನು ಕಂಡುಕೊಂಡಿದ್ದೇನೆ' ಎಂದು ತಮ್ಮ ಸಿನಿ ಜೀವನದ ಬಗ್ಗೆ ಹೇಳಿಕೊಂಡಿದ್ದಾರೆ ಧನ್ಯಾ ರಾಮ್‌ಕುಮಾರ್.

ಧನ್ಯಾ ರಾಮ್‌ಕುಮಾರ್ ಅಭಿನಯದ 'ಕಾಲಾಪತ್ಥರ್' ಸಿನಿಮಾ ಬಿಡುಗಡೆಯ ಹೊಸ್ತಿಲಿನಲ್ಲಿದೆ. ಸಿನಿಮಾದಲ್ಲಿ ಧನ್ಯಾ ಹಳ್ಳಿ ಹುಡುಗಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ತಮ್ಮ ಪಾತ್ರವನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಇದೇ ವೇಳೆ, ತಮ್ಮ ಪಾತ್ರಗಳ ಆಯ್ಕೆಯ ಕುರಿತೂ ಮಾತನಾಡಿದ್ದಾರೆ.

'ಒಂದೇ ವಿಧದ ಪಾತ್ರ, ಕಥೆಗಳಿಗೆ ಅಂಟಿಕೊಳ್ಳದಂಥ ಸಿನಿಮಾಗಳು ನನ್ನ ಆಯ್ಕೆಯಾಗಿರುತ್ತವೆ. ಒಬ್ಬ ಕಲಾವಿದನೊಳಗೆ ಎರಡು ರೀತಿಯ ಪಯಣವಿರುತ್ತದೆ ಎಂಬುದು ನನ್ನ ನಂಬಿಕೆ. ಒಂದು, ನಮ್ಮೊಳಗೆ ನಮ್ಮನ್ನು ಪೋಷಿಸಿಕೊಳ್ಳುವ, ಬೆಳೆಯುವ ಪಯಣ. ಮತ್ತೊಂದು ಬಾಹ್ಯ ಪಯಣ. ಜನರ ಮನಸ್ಸು ಗೆದ್ದು, ಅವರ ಹೃದಯದಲ್ಲಿ ಜಾಗ ಕಂಡುಕೊಳ್ಳುವುದು. ಈ ಉದ್ದೇಶ ಸಾಧಿಸಲು ನಮ್ಮ ಪಾತ್ರಗಳ ಆಯ್ಕೆಯೂ ತಕ್ಕಂತಿರಬೇಕು' ಎಂದು ಹೇಳಿದ್ದಾರೆ.

'ನಾನು ಏನನ್ನು ಆರಿಸಿಕೊಳ್ಳುತ್ತೇನೋ ಅದರಲ್ಲಿ ತುಂಬಾ ಎಚ್ಚರಿಕೆಯಿಂದಿರುತ್ತೇನೆ. ಪ್ರಸ್ತುತ ಸಂದರ್ಭದಲ್ಲಿ ಏನನ್ನೂ ಊಹಿಸಲು ಸಾಧ್ಯವಿಲ್ಲ. ಮಾಸ್ ಸಿನಿಮಾದಲ್ಲಿ ಅಭಿನಯಿಸಿ ಜನಪ್ರಿಯತೆ ಗಳಿಸುತ್ತೇನೆ ಅಥವಾ ಕಂಟೆಂಟ್ ಆಧಾರಿತ ಸಿನಿಮಾಗಳಲ್ಲಿ ಅಭಿನಯಿಸಿ ನನ್ನ ಸಾಮರ್ಥ್ಯ ತೋರುತ್ತೇನೆ ಎಂದು ಯಾರೂ ಹೇಳುವಂತಿಲ್ಲ. ಎಲ್ಲವೂ ಸಂದರ್ಭಕ್ಕೆ ತಕ್ಕ ಹಾಗಿರುತ್ತದೆ. ನಾವು ಏನನ್ನು ಆರಿಸಿಕೊಳ್ಳುತ್ತೇವೆ ಎಂಬ ಬಗ್ಗೆ ನಮಗೆ ತಿಳಿದಿರಬೇಕು' ಎಂದು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ.

'ನನಗೆ ಕಲಿಕೆಯಲ್ಲಿ ಆಸಕ್ತಿಯಿದೆ. ಪ್ರತಿಯೊಬ್ಬರಲ್ಲೂ ಕಲಿಯಬೇಕಾದ್ದು ಇರುತ್ತದೆ. ಕಲಿಕೆಯಲ್ಲಿ ನನಗೆ ಖುಷಿಯಿದೆ. ಕಲಾವಿದರು ಒಟ್ಟೊಟ್ಟಿಗೆ ಬೆಳೆಯಬೇಕು. ನಾನು ನಂಬರ್ ಒನ್ ಎಂದು ತಿಳಿದುಕೊಂಡುಬಿಟ್ಟರೆ, ಅಲ್ಲಿಂದಲೇ ಅವನತಿ ಆರಂಭವಾಗಬಹುದು' ಎಂದಿದ್ದಾರೆ.

2021ರಲ್ಲಿ 'ನಿನ್ನ ಸನಿಹಕೆ' ಸಿನಿಮಾ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟ ನಟಿ ಧನ್ಯಾ ರಾಮ್ ಕುಮಾರ್, ಹೈಡ್ ಅಂಡ್ ಸೀಕ್, ದಿ ಜಡ್ಜ್‌ಮೆಂಟ್, ಎಲ್ಲಾ ನಿನಗಾಗಿ, ಪೌಡರ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಕಾಲಾಪತ್ಥರ್ ಸಿನಿಮಾ ಬಿಡುಗಡೆಗೆ ಸಜ್ಜಾಗಿದ್ದು, ಅನೂಪ್ ಸೀಳಿನ್ ಸಂಗೀತ ನೀಡಿರುವ ಈ ಚಿತ್ರದ ಐದು ಹಾಡುಗಳು 'ಸೌಂಡ್ಸ್ ಆಫ್ ಕಾಲಾಪತ್ಥರ್' ಗುಚ್ಛದಲ್ಲಿ ಈಚೆಗೆ ಬಿಡುಗಡೆಯಾಗಿದೆ.





## ಕಾಡು ನೋಡ ಹೋದೆ...

ಕಾಡುಮೇಡು ಸುತ್ತುವ ಹವ್ಯಾಸವಿರುವ ನಟಿ ಕೃಷಿ ತಾಪಂಡಗೆ ಈಗ ಕ್ಯಾಮೆರಾ ಕೂಡ ಸಾಥ್ ಕೊಟ್ಟಿದೆ. ವನ್ಯಜೀವಿ ಛಾಯಾಗ್ರಹಣ ಮಾಡುವ ಆಸೆ ಹೊತ್ತು ಕೃಷಿ, ಕಾಡಿನ ಹಾದಿ ಹಿಡಿದಿದ್ದಾರೆ.

ಈಚೆಗೆ ಕಬಿನಿಗೆ ಭೇಟಿ ಕೊಟ್ಟಿರುವ ಕೃಷಿ, ಹುಲಿಯ ಫೋಟೊ ಕ್ಲಿಕ್ಕಿಸಿದ ಖುಷಿಯಲ್ಲಿದ್ದಾರೆ. ಪ್ರವಾಸದ ಮೂಡ್‌ನಲ್ಲಿರುವ ಅವರು, ಈ ವರ್ಷ ಪನ್ನಾ ನ್ಯಾಷನಲ್ ಪಾರ್ಕ್, ಬಾಂಧವಗಢ ನ್ಯಾಷನಲ್ ಪಾರ್ಕ್, ಮಸ್ಸೈಮಾರಾಗೂ ಹೋಗಿ ಬಂದಿದ್ದಾರೆ. ಇತ್ತೀಚೆಗೆ ಕಬಿನಿಗೆ ಹೋಗಿರುವ ಅವರು, ತಮ್ಮ ಅನುಭವಗಳನ್ನು ಬಿಚ್ಚಿಟ್ಟಿದ್ದಾರೆ.

'ಭೂದೃಶ್ಯ, ವನ್ಯಜೀವಿಗಳು, ಜೀವವೈವಿಧ್ಯ ಈ ಎಲ್ಲಾ ವಿಷಯಗಳಲ್ಲೂ ಪ್ರತಿ ಕಾಡು ಕೂಡ ತನ್ನದೇ ಒಂದು ಅಸ್ತಿತ್ವ, ವೈವಿಧ್ಯ ಹೊಂದಿರುತ್ತದೆ. ಪನ್ನಾ ನ್ಯಾಷನಲ್ ಪಾರ್ಕ್‌ನಲ್ಲಿ ಮೊದಲ ಬಾರಿಗೆ ಮುದ್ದಾದ ಮರಿಗಳೊಂದಿಗಿದ್ದ ಹುಲಿಯನ್ನು ಕಂಡಿದ್ದೆ. ಆನಂತರ ವನ್ಯಜೀವಿಗಳ ಬಗ್ಗೆ ನನ್ನಲ್ಲಿ ಪ್ರೀತಿ ಹುಟ್ಟಿಕೊಂಡಿತು. ಕಬಿನಿಯಲ್ಲಿ ಎಂಟು ಬಾರಿ ಸಫಾರಿ ಮಾಡಿದ್ದೇನೆ. ಅದೊಂಥರಾ ಹೇಳಿಕೊಳ್ಳಲಾರದಂಥ ಭಾವ. ಕಬಿನಿಯಲ್ಲಿ ಕೂಡ ಹುಲಿ ಫೋಟೊ ಸೆರೆಹಿಡಿದಿದ್ದೇನೆ. ಮರದ ಮೇಲೆ ಕುಳಿತಿದ್ದ ಚಿರತೆ ಫೋಟೊವನ್ನೂ ತೆಗೆದಿದ್ದೇನೆ. ಅದು ಮತ್ತೂ ಒಂದು ಸುಂದರ ಚಿತ್ರ' ಎಂದು ಉತ್ಸಾಹದಿಂದ ಹೇಳಿಕೊಂಡಿದ್ದಾರೆ.

ಜಂಜಡಗಳಿಂದ ಹೊರಗುಳಿದು ಕಾಡಿಗೆ ಹೋಗಿ ಕೂರುವುದು ಕೃಷಿಗೆ ಒಂದು ರೀತಿ ಥೆರಪಿಯಂತೆ. 'ಕಾಡು ಸುತ್ತುತ್ತಾ ಫೋಟೊ ತೆಗೆಯುವುದು ನನಗೆ ಥ್ರಿಲ್ ಕೊಡುತ್ತದೆ. ಹಲವರು, ದುಬಾರಿ ಕ್ಯಾಮೆರಾ ಯಾಕೆ ತೆಗೆದುಕೊಳ್ಳುತ್ತೀಯ ಎಂದು ಆಕ್ಷೇಪಿಸಿದರು. ಆದರೆ ವನ್ಯಜೀವಿ ಛಾಯಾಗ್ರಹಣದಲ್ಲಿ ಮುಂದುವರೆಯುವ ವಿಶ್ವಾಸ ನನ್ನದು' ಎಂದು ತಮ್ಮ ಕ್ಯಾಮೆರಾ ಪ್ರೀತಿಯನ್ನು ಹಂಚಿಕೊಳ್ಳುತ್ತಾರೆ.